All India Radio: Bangalore
National Bulletin In Kannada
06.09.2026  7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
06.09.2026  7.35 am

<>><<*><><<>

ಮುಖ್ಯಾಂಶಗಳು

೧. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಇಂದಿನಿಂದ ಅಸ್ಸಾಂ, ಮೇಘಾಲಯ, ಮಣಿಪುರ, ಅರುಣಾಚಲ ಪ್ರದೇಶಕ್ಕೆ ನಾಲ್ಕು ದಿನಗಳ ಭೇಟಿ

೨. "ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ" ಎಂಬ ಧ್ಯೇಯ ವಾಕ್ಯದಡಿ ನವದೆಹಲಿಯಲ್ಲಿ ಇದೇ ೧೨ ರಿಂದ ೧೪ನೇ ಬ್ರಿಕ್ಸ್ ಶೃಂಗಸಭೆ

೩. ಅಂಡಮಾನ್ ದ್ವೀಪಗಳ 'ವಸಾಹತುಶಾಹಿ ಕಾರಾಗೃಹ ನೆಲೆ' ಮತ್ತು 'ನಿಕೋಬಾರಿ ಸಾಂಸ್ಕೃತಿಕ ಪಾರಂಪರ್ಯ ಸರಣಿ' ಯುನೆಸ್ಕೋ ವಿಶ್ವ ಪಾರಂಪರಿಕ ತಾತ್ಕಾಲಿಕ ಪಟ್ಟಿಗೆ ಅಧಿಕೃತ ಸೇರ್ಪಡೆ

೪. ಮಹಿಳಾ ಏಷ್ಯಾಕಪ್ ಟಿ-೨೦ ಕ್ರಿಕೆಟ್; ಪಾಕಿಸ್ತಾನ ವಿರುದ್ಧ ಭಾರತಕ್ಕೆ ೮ ವಿಕೆಟ್‌ಗಳ ಜಯ

<>><<*><><<>

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಇಂದಿನಿಂದ ಅಸ್ಸಾಂ, ಮೇಘಾಲಯ, ಮಣಿಪುರ ಮತ್ತು ಅರುಣಾಚಲ ಪ್ರದೇಶಕ್ಕೆ ನಾಲ್ಕು ದಿನಗಳ ಭೇಟಿ ನೀಡಲಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ ಅವರು, ಐತಿಹಾಸಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ಮಹತ್ವದ ಸಂಸ್ಥೆಗಳಿಗೆ ಭೇಟಿ ನೀಡುವುದರ ಜೊತೆಗೆ ಹಲವಾರು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಇಂದು ಉಪರಾಷ್ಟ್ರಪತಿಗಳು, ಅಸ್ಸಾಂನ ಗುವಾಹಟಿಯಲ್ಲಿರುವ ಗೀತಾನಗರ ಕಾಲೇಜಿನ ಸುವರ್ಣ ಮಹೋತ್ಸವ ಸಂಭ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಅವರು ಗುವಾಹಟಿಯ ಶಂಕರದೇವ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ನಾಳೆ ಅವರು, ಗುವಾಹಟಿ ವಿಶ್ವವಿದ್ಯಾಲಯದಲ್ಲಿ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ವಿಶ್ವವಿದ್ಯಾಲಯದ ಸಮಾವೇಶ ಕೇಂದ್ರದಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ನಾಗರಿಕರೊಂದಿಗೆ ಸಂವಾದ ನಡೆಸಲಿದ್ದಾರೆ. ಇದೇ ೮ ರಂದು ಉಪರಾಷ್ಟ್ರಪತಿಗಳು, ಇಂಫಾಲ್‌ಗೆ ಭೇಟಿ ನೀಡಲಿದ್ದಾರೆ. ಅವರು ಮೊಯಿರಾಂಗ್‌ನಲ್ಲಿರುವ ಐಎನ್‌ಎ ವಸ್ತುಸಂಗ್ರಹಾಲಯ ಮತ್ತು ಇಂಫಾಲ್‌ನ ಸೈನಿಕ್ ಶಾಲೆಯನ್ನು ಭೇಟಿ ಮಾಡಲಿದ್ದಾರೆ. ನಂತರ ಅವರು ಇಟಾನಗರಕ್ಕೆ ತೆರಳಲಿದ್ದಾರೆ. ತಮ್ಮ ಭೇಟಿಯ ಕೊನೆಯ ದಿನದಂದು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು, ಅರುಣಾಚಲ ಪ್ರದೇಶ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ನೈದಾರ್ ನಾಮ್ಲೋ, ಇಟಾನಗರದ ಜವಾಹರಲಾಲ್ ನೆಹರು ರಾಜ್ಯ ವಸ್ತುಸಂಗ್ರಹಾಲಯ ಹಾಗೂ ಶ್ರವಣ ಮತ್ತು ದೃಷ್ಟಿಹೀನರಿಗಾಗಿ ಡೊನ್ಯಿ ಪೊಲೊ ಮಿಷನ್ ಶಾಲೆಗೆ ಭೇಟಿ ನೀಡಲಿದ್ದಾರೆ.

<>><<*><><<>

ಅಂಡಮಾನ್ ದ್ವೀಪಗಳ 'ವಸಾಹತುಶಾಹಿ ಕಾರಾಗೃಹ ನೆಲೆ' ಮತ್ತು ನಿಕೋಬಾರ್ ದ್ವೀಪಗಳ ಮಧ್ಯಭಾಗದಲ್ಲಿರುವ 'ನಿಕೋಬಾರಿ ಸಾಂಸ್ಕೃತಿಕ ಪಾರಂಪರ್ಯ ಸರಣಿ' ಯುನೆಸ್ಕೋ ವಿಶ್ವ ಪಾರಂಪರಿಕ ಕೇಂದ್ರದ ಭಾರತದ ತಾತ್ಕಾಲಿಕ ಪಟ್ಟಿಗೆ ಅಧಿಕೃತವಾಗಿ ಸೇರ್ಪಡೆಯಾಗಿವೆ.

ಚಾತಮ್ ದ್ವೀಪ, ನೇತಾಜಿ ಸುಭಾಷ್ ಚಂದ್ರ ಬೋಸ್ ದ್ವೀಪ, ವೈಪರ್ ದ್ವೀಪ ಮತ್ತು ಪ್ರಸಿದ್ಧ ಸೆಲ್ಯುಲಾರ್ ಜೈಲುಗಳನ್ನು ಒಳಗೊಂಡಿರುವ ಈ ಐತಿಹಾಸಿಕ ಪ್ರದೇಶವು, ೧೮೫೮ ರಿಂದ ಅಂಡಮಾನ್‌ನಲ್ಲಿ ಬ್ರಿಟಿಷ್ ವಸಾಹತುಶಾಹಿ ಕಾರಾಗೃಹ ವ್ಯವಸ್ಥೆಯ ವಿಕಸನವನ್ನು ಪ್ರತಿನಿಧಿಸುತ್ತದೆ. 'ಕಾಲಾಪಾನಿ' ಎಂದೇ ಪ್ರಸಿದ್ದವಾಗಿರುವ ಸೆಲ್ಯುಲಾರ್ ಜೈಲು, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರ ತ್ಯಾಗ, ಯಾತನೆ ಮತ್ತು ಅಪ್ರತಿಮ ಪ್ರತಿರೋಧದ ಶಾಶ್ವತ ಸಂಕೇತವಾಗಿ ಹೊರಹೊಮ್ಮಿದೆ. ನಿಕೋಬಾರ್ ದ್ವೀಪಗಳ ಮಧ್ಯಭಾಗದಲ್ಲಿರುವ 'ನಿಕೋಬಾರಿ ಸಾಂಸ್ಕೃತಿಕ ಪಾರಂಪರ್ಯ ಸರಣಿ' ವಿಶಿಷ್ಟ ದ್ವೀಪ, ಪರಿಸರ ವ್ಯವಸ್ಥೆಯೊಳಗೆ ತಲೆಮಾರುಗಳಿಂದ ವಿಕಸನಗೊಂಡಿರುವ ಸ್ಥಳೀಯ ಜ್ಞಾನ, ಸಾಂಪ್ರದಾಯಿಕ ಆಚರಣೆಗಳು, ಸಮುದಾಯ ಸಂಸ್ಥೆಗಳು, ಪಾರಂಪರಿಕ ನೆಲೆಗಳು, ಭೌತಿಕ ಸಂಸ್ಕೃತಿ ಮತ್ತು ಜೀವಂತ ಸಂಪ್ರದಾಯಗಳ ನಿರಂತರತೆಯನ್ನು ಪ್ರತಿಬಿಂಬಿಸುತ್ತದೆ.

<>><><*><><<>

ಇದೇ ೧೨ ಮತ್ತು ೧೩ರಂದು ನವದೆಹಲಿಯಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯ ಅಂಗವಾಗಿ ಆಯೋಜಿಸಲಾಗಿರುವ ಉದ್ಘಾಟನಾ ಐಬ್ರಿಕ್ಸ್ ಶೃಂಗಸಭೆಯಲ್ಲಿ ೫೦೦ಕ್ಕೂ ಹೆಚ್ಚು ಸಾಂಸ್ಥಿಕ ಹೂಡಿಕೆದಾರರು, ಹಣಕಾಸು ಸಚಿವರು ಮತ್ತು ಉದ್ಯಮ ಮುಖಂಡರು ಭಾಗವಹಿಸಲಿದ್ದಾರೆ. ಎರಡು ದಿನಗಳ ಈ ಶೃಂಗಸಭೆಯು ೨೧ ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಹಾಗೂ ಪಾಲುದಾರ ರಾಷ್ಟ್ರಗಳಲ್ಲಿನ ಮೂಲಸೌಕರ್ಯ, ಇಂಧನ ಮತ್ತು ಡಿಜಿಟಲ್ ಸಾಮರ್ಥ್ಯ ಯೋಜನೆಗಳಿಗೆ ಸಾರ್ವಭೌಮ ಬಂಡವಾಳವನ್ನು ಸಂಪರ್ಕಿಸುವ ಉದ್ದೇಶ ಹೊಂದಿದೆ. ಬ್ರಿಕ್ಸ್ ರಾಷ್ಟ್ರಗಳ ನಡುವಿನ ಗಡಿಯಾಚೆಗಿನ ಹೂಡಿಕೆಗಳು, ಡಾಲರ್‌ಯೇತರ ವಹಿವಾಟುಗಳು ಮತ್ತು ಪಾವತಿ ವ್ಯವಸ್ಥೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು. ಭಾರತದ ಏಕೀಕೃತ ಪಾವತಿ ವ್ಯವಸ್ಥೆ ಯುಪಿಐ ಮತ್ತು ಬ್ರೆಜಿಲ್‌ನ ಪಿಕ್ಸ್‌ನಂತಹ ರಾಷ್ಟ್ರೀಯ ತ್ವರಿತ ಪಾವತಿ ವ್ಯವಸ್ಥೆಗಳನ್ನು ಪರಸ್ಪರ ಸಂಪರ್ಕಿಸುವುದು ಹಾಗೂ ಕೇಂದ್ರ ಬ್ಯಾಂಕ್ ಡಿಜಿಟಲ್ ಕರೆನ್ಸಿಗಳ ನಡುವೆ ಪರಸ್ಪರ ಕಾರ್ಯಸಾಮರ್ಥ್ಯ ಕಲ್ಪಿಸುವ ಬಗ್ಗೆಯೂ ಚರ್ಚೆಗಳು ನಡೆಯುವ ನಿರೀಕ್ಷೆಯಿದೆ. ಬ್ರಿಕ್ಸ್ ಸದಸ್ಯ ಮತ್ತು ಪಾಲುದಾರ ರಾಷ್ಟ್ರಗಳಾದ್ಯಂತ ಮೂಲಸೌಕರ್ಯ, ಇಂಧನ ಹಾಗೂ ಡಿಜಿಟಲ್ ಯೋಜನೆಗಳಿಗೆ ಸಾಂಸ್ಥಿಕ ಬಂಡವಾಳವನ್ನು ಸಂಪರ್ಕಿಸುವುದು ಸಭೆಯ ಪ್ರಮುಖ ಉದ್ದೇಶವಾಗಿದೆ. ೨೦೨೬ರ ಬ್ರಿಕ್ಸ್ ಅಧ್ಯಕ್ಷ ರಾಷ್ಟ್ರವಾಗಿರುವ ಭಾರತವು ಇದೇ ೧೨ ಮತ್ತು ೧೩ರಂದು ನವದೆಹಲಿಯ ಭಾರತ್ ಮಂಟಪದಲ್ಲಿ ೧೮ನೇ ಬ್ರಿಕ್ಸ್ ಶೃಂಗಸಭೆಯನ್ನು ಆಯೋಜಿಸಲಿದೆ. ಶೃಂಗಸಭೆಯಲ್ಲಿ ಬ್ರಿಕ್ಸ್ ಸದಸ್ಯ ಮತ್ತು ಪಾಲುದಾರ ರಾಷ್ಟ್ರಗಳ ನಾಯಕರು ಹಾಗೂ ಆಹ್ವಾನಿತ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಭಾರತದ ಬ್ರಿಕ್ಸ್ ಅಧ್ಯಕ್ಷತೆಯು "ಸ್ಥಿತಿಸ್ಥಾಪಕತ್ವ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ" ಎಂಬ ಧ್ಯೇಯವಾಕ್ಯದಿಂದ ಮಾರ್ಗದರ್ಶಿಸಲ್ಪಡುತ್ತಿದ್ದು, "ಮಾನವೀಯತೆಗೆ ಮೊದಲ ಆದ್ಯತೆ" ಎಂಬ ಆಶಯದಡಿ ಪ್ರಧಾನಮಂತ್ರಿಯವರ ಜನಕೇಂದ್ರಿತ ದೃಷ್ಟಿಕೋನವನ್ನು ಇದು ಪ್ರತಿಬಿಂಬಿಸುತ್ತದೆ.

<>><><*><><<>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಡಾ.ದಿನೇಶ್ ಶರ್ಮಾ ಅವರನ್ನು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಿದ್ದಾರೆ. ಡಾ.ದಿನೇಶ್ ಶರ್ಮಾ ಅವರು ಅಡ್ಮಿರಲ್ ದೇವೇಂದ್ರ ಕುಮಾರ್ ಜೋಷಿ ಅವರ ಉತ್ತರಾಧಿಕಾರಿಯಾಗಲಿದ್ದಾರೆ. ಅಡ್ಮಿರಲ್ ದೇವೇಂದ್ರ ಕುಮಾರ್ ಜೋಷಿ ಅವರು ೨೦೧೭ರ ಅಕ್ಟೋಬರ್‌ನಿಂದ ದ್ವೀಪಗಳ ಲೆಫ್ಟಿನೆಂಟ್ ಗವರ್ನರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಡಾ.ದಿನೇಶ್ ಶರ್ಮಾ ಅವರು ಪ್ರಸ್ತುತ ಉತ್ತರ ಪ್ರದೇಶದಿಂದ ರಾಜ್ಯಸಭಾ ಸದಸ್ಯರಾಗಿದ್ದು, ಈ ಹಿಂದೆ ರಾಜ್ಯದ ಉಪಮುಖ್ಯಮಂತ್ರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

<>><><*><><<>

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ೩ ದಿನಗಳ ಭೇಟಿಗಾಗಿ ನಿನ್ನೆ ರಾತ್ರಿ ಗೋವಾಕ್ಕೆ ತಲುಪಿದ್ದಾರೆ. ಭೇಟಿಯ ಸಂದರ್ಭದಲ್ಲಿ ಅವರು ಪಶ್ಚಿಮ ವಲಯ ಮಂಡಳಿಯ ೨೮ನೇ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಇಂದು ಅವರು ಗೃಹ ಸಚಿವಾಲಯದ ಸಭೆಯ ಅಧ್ಯಕ್ಷತೆ ವಹಿಸಲಿದ್ದು, ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಬಳಿಕ ಬಿಜೆಪಿ ನೂತನ ರಾಜ್ಯ ಕಚೇರಿಯನ್ನು ಉದ್ಘಾಟಿಸಲಿದ್ದಾರೆ.

<>><><*><><<>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಹಿಂದಿನ ತಲೆಮಾರುಗಳಿಗಿಂತಲೂ ದೊಡ್ಡ ಕನಸುಗಳನ್ನು ಕಾಣುವಂತೆ ಮತ್ತು ಜಗತ್ತನ್ನು ಮುನ್ನಡೆಸಬಲ್ಲ ಜಾಗತಿಕ ಸಮಾಲೋಚನಾ, ಲೆಕ್ಕಪತ್ರ, ಹಣಕಾಸು ಹಾಗೂ ಕಾನೂನು ಸಂಸ್ಥೆಗಳನ್ನು ನಿರ್ಮಿಸುವಂತೆ ಯುವ ಸಮೂಹಕ್ಕೆ ಕರೆ ನೀಡಿದ್ದಾರೆ. ನವದೆಹಲಿಯ ದೆಹಲಿ ವಿಶ್ವವಿದ್ಯಾಲಯದ ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್‌ನ ಶತಮಾನೋತ್ಸವ ಸಮಾರಂಭದಲ್ಲಿ ನಿನ್ನೆ ಸಂಜೆ ಪ್ರಧಾನಿ ಅವರು ಮಾತನಾಡಿದರು. ಇಂದು ಭಾರತೀಯರು ವಿಶ್ವದ ಪ್ರಮುಖ ಕಂಪನಿಗಳನ್ನು ಮುನ್ನಡೆಸುತ್ತಿದ್ದಾರೆ. ಹಾಗಾದರೆ ಭಾರತೀಯರು ನಿರ್ಮಿಸುವ ಕಂಪನಿಗಳು ಜಗತ್ತನ್ನು ಮುನ್ನಡೆಸಬಾರದು ಏಕೆ ಎಂದು ಅವರು ಪ್ರಶ್ನಿಸಿದ್ದಾರೆ. ಜಾಗತಿಕ ಅನಿಶ್ಚಿತತೆಯ ನಡುವೆಯೂ ಭಾರತದ ತ್ರೈಮಾಸಿಕ ಬೆಳವಣಿಗೆ ದರ ಶೇಕಡಾ ೭.೮ರಷ್ಟಿರುವುದು ದೇಶದ ಆರ್ಥಿಕ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು. ನೀತಿ ನಿಷ್ಕ್ರಿಯತೆಯಿಂದ ನೀತಿ ಚಲನಶೀಲತೆಯತ್ತ ಭಾರತ ಬಹುದೂರ ಸಾಗಿದೆ. ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗುತ್ತಿರುವ ಭಾರತವನ್ನು ಜಗತ್ತು ಗಮನಿಸುತ್ತಿದೆ ಎಂದು ತಿಳಿಸಿದರು. ಹಿಂದಿನ ಸವಾಲುಗಳನ್ನು ಇಂದಿನ ಸಾಧನೆಗಳೊಂದಿಗೆ ಹೋಲಿಸಿದ ಪ್ರಧಾನಮಂತ್ರಿ, ಭಯೋತ್ಪಾದನೆಯನ್ನು ಸೋಲಿಸಲಾಗಿದ್ದು, ಸಶಸ್ತ್ರ ಪಡೆಗಳು ಶತ್ರುಗಳ ನೆಲೆಯಲ್ಲೇ ಆತ್ಮವಿಶ್ವಾಸದಿಂದ ದಾಳಿ ನಡೆಸುತ್ತಿವೆ ಮತ್ತು ಜಮ್ಮು-ಕಾಶ್ಮೀರದಿಂದ ಈಶಾನ್ಯ ಭಾರತದವರೆಗೆ ಶಾಂತಿ ಮರುಸ್ಥಾಪನೆಯಾಗಿದೆ ಎಂದು ಹೇಳಿದರು. ನಿರಂತರ ಟೀಕೆಗಳಿಗೆ ತಕ್ಕ ಉತ್ತರ ನೀಡುವ ರೀತಿಯಲ್ಲಿ ಆರ್ಥಿಕ ಅಂಕಿ-ಅಂಶಗಳನ್ನು ಮಂಡಿಸಿದ ಪ್ರಧಾನಮಂತ್ರಿ, ಏಪ್ರಿಲ್‌ನಿಂದ ಜೂನ್‌ವರೆಗಿನ ಅವಧಿಯಲ್ಲಿ ವಿದ್ಯುತ್ ಉತ್ಪಾದನೆ ಶೇಕಡಾ ೯ರಷ್ಟು ಹೆಚ್ಚಾಗಿದೆ ಎಂದು ವಿವರಿಸಿದರು. ಇದೇ ಅವಧಿಯಲ್ಲಿ ಒಟ್ಟಾರೆ ವಾಹನಗಳ ಮಾರಾಟ ಶೇಕಡಾ ೨೦ಕ್ಕೂ ಅಧಿಕ ಪ್ರಮಾಣದಲ್ಲಿ ಏರಿಕೆಯಾಗಿದೆ. ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇಕಡಾ ೨೦ರಷ್ಟು ಮತ್ತು ತ್ರಿಚಕ್ರ ವಾಹನಗಳ ಮಾರಾಟದಲ್ಲಿ ಸುಮಾರು ಶೇಕಡಾ ೩೦ರಷ್ಟು ಬೆಳವಣಿಗೆಯಾಗಿದೆ ಎಂದರು. ಉಕ್ಕು ಮತ್ತು ಸಿಮೆಂಟ್ ಬಳಕೆಯಲ್ಲಿ ಶೇಕಡಾ ೮ರಷ್ಟು ಹೆಚ್ಚಳವಾಗಿರುವುದು ನಿರ್ಮಾಣ, ವಸತಿ ಮತ್ತು ವಾಣಿಜ್ಯ ಚಟುವಟಿಕೆಗಳು ತ್ವರಿತವಾಗಿ ವಿಸ್ತರಿಸುತ್ತಿರುವುದನ್ನು ಸಾಬೀತುಪಡಿಸುತ್ತದೆ ಎಂದು ಅವರು ಒತ್ತಿ ಹೇಳಿದರು. ಸ್ಮಾರ್ಟ್‌ಫೋನ್‌ಗಳ ರಫ್ತು ಈಗ ೨.೫ ಲಕ್ಷ ಕೋಟಿ ರೂಪಾಯಿಗೂ ಅಧಿಕವಾಗಿದೆ. ದೇಶೀಯ ರಕ್ಷಣಾ ಉತ್ಪಾದನೆ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ಸುಮಾರು ೨ ಲಕ್ಷ ಕೋಟಿ ರೂಪಾಯಿಗೆ ತಲುಪಿದೆ ಎಂದು ಪ್ರಧಾನಿ ತಿಳಿಸಿದರು.

<>><><*><><<>

ದುಬೈನಲ್ಲಿ ಕಳೆದ ರಾತ್ರಿ ನಡೆದ ಮಹಿಳಾ ಏಷ್ಯಾಕಪ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಭಾರತ, ಪಾಕಿಸ್ತಾನ ತಂಡವನ್ನು ೭ ವಿಕೆಟ್‌ಗಳಿಂದ ಮಣಿಸಿದೆ. ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ, ೧೮.೧ ಓವರ್‌ಗಳಲ್ಲಿ ಕೇವಲ ೫೫ ರನ್‌ಗಳಿಸಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು. ಇದು ಟಿ-೨೦ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಆ ತಂಡದ ಅತ್ಯಂತ ಕಡಿಮೆ ಮೊತ್ತವಾಗಿದೆ. ಭಾರತದ ಯುವ ಸ್ಪಿನ್ನರ್‌ಗಳಾದ ಶ್ರೀ ಚರಣಿ ಮತ್ತು ಪ್ರೇಮಾ ರಾವತ್ ತಲಾ ೩ ವಿಕೆಟ್‌ಗಳನ್ನು ಪಡೆದರೆ, ದೀಪ್ತಿ ಶರ್ಮಾ ೨ ವಿಕೆಟ್‌ಗಳನ್ನು ಕಬಳಿಸಿದರು.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>